# ಹದಿಹರೆಯದವರು ಕಂಟೆಂಟ್ ರಚಿಸುವುದಕ್ಕೆ ಸಂಬಂಧಿಸಿದ **ಕುಟುಂಬ ಗೈಡ್**

→ ಪೋಷಕರಿಗಾಗಿ ಸಲಹೆಗಳು

common sense networks™ ಪಾಲುದಾರಿಕೆ: YouTube



**ಡಿಜಿಟಲ್ ಕನೆಕ್ಟಿವಿಟಿಯ ಪ್ರಪಂಚದಲ್ಲಿ, ಹದಿಹರೆಯದವರು ಕೇವಲ ಕಂಟೆಂಟ್ ಗ್ರಾಹಕರಲ್ಲ—ಅವರು ಕಂಟೆಂಟ್ ರಚನೆಕಾರರು ಕೂಡಾ ಹೌದು.**

ತಮ್ಮ ಆಸಕ್ತಿಗಳನ್ನು ಅನ್ವೇಷಿಸಲು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಮತ್ತು ಇತರರೊಂದಿಗೆ ಬೆರೆಯಲು ವೀಡಿಯೊಗಳನ್ನು ರಚಿಸುವುದು ಅವರಿಗೆ ಒಂದು ಮೋಜಿನ ವಿಧಾನವಾಗಿದೆ. ಮತ್ತು ಪೋಷಕರು ಅನೇಕ ರೀತಿಗಳಲ್ಲಿ ಇದರಲ್ಲಿ ತೊಡಗಿಸಿಕೊಳ್ಳಬಹುದು. ನಿಮ್ಮ ಹದಿವಯಸ್ಕ ಮಗುವಿನ ಆನ್‌ಲೈನ್ ಪ್ರಪಂಚವನ್ನು ಒಂದಿಷ್ಟು ಹೆಚ್ಚು ಸಕಾರಾತ್ಮಕಗೊಳಿಸಲು, ಸಾಕಷ್ಟು ಸುರಕ್ಷಿತಗೊಳಿಸಲು ಮತ್ತು ಬಹಳಷ್ಟು ಸಂತಸದಾಯಕಗೊಳಿಸಲು ಈ ಪರಿಶೀಲನಾಪಟ್ಟಿಗಳನ್ನು ಬಳಸಿ!

## ಯೋಗಕ್ಷೇಮ

ಆರೋಗ್ಯಪೂರ್ಣ ಡಿಜಿಟಲ್ ಅಭ್ಯಾಸಗಳನ್ನು ಪ್ರೋತ್ಸಾಹಿಸುವ ಮತ್ತು ನಿಮ್ಮ ಹದಿವಯಸ್ಕ ಮಗುವಿನ ಸಮಗ್ರ ಯೋಗಕ್ಷೇಮಕ್ಕೆ ಆದ್ಯತೆ ನೀಡುವ ಬೆಂಬಲದ ಪರಿಸರವನ್ನು ರಚಿಸಿ. ಉತ್ತಮ ಭಾವನೆ ಹೊಂದಿರುವುದು ಮತ್ತು ಮಜಾ ಮಾಡುವುದು ಪರಸ್ಪರ ಸಂಬಂಧಿತವಾಗಿವೆ!





# ಹದಿಹರೆಯದವರು ಕಂಟೆಂಟ್ ರಚಿಸುವುದಕ್ಕೆ ಸಂಬಂಧಿಸಿದ **ಕುಟುಂಬ ಗೈಡ್**

→ ಪೋಷಕರಿಗಾಗಿ ಸಲಹೆಗಳು

common sense networks™ ಪಾಲುದಾರಿಕೆ: YouTube

### ಸಕಾರಾತ್ಮಕ ಸಮುದಾಯವನ್ನು ನಿರ್ಮಿಸಿ

- **ಸಹಾನುಭೂತಿಯೊಂದಿಗೆ ರಚಿಸಿ** ✓
  ಅವರ ವೀಡಿಯೊಗಳು ಮತ್ತು ಕಾಮೆಂಟ್‌ಗಳನ್ನು ಇತರರು ಯಾವ ರೀತಿ ಸ್ವೀಕರಿಸಬಹುದು ಎಂಬುದನ್ನು ಪರಿಗಣಿಸಿ.
- **ಸಹಿಷ್ಣುಗಳಾಗಿರಿ**
  ಅವರ ಕಂಟೆಂಟ್ ಯಾರಿಗೂ ಆಕ್ಷೇಪ ಉಂಟುಮಾಡದ ಹಾಗೆ ಅಥವಾ ಯಾರನ್ನೂ ದೂರವಿರಿಸದ ಹಾಗೆ ನೋಡಿಕೊಳ್ಳಿ.
- **ವಿಮರ್ಶಾತ್ಮಕವಾಗಿ ಯೋಚಿಸಿ**
  ಅವರು ಹೇಳುತ್ತಿರುವುದು/ಹಂಚಿಕೊಳ್ಳುತ್ತಿರುವುದು ನಿಜ ಎಂಬುದನ್ನು ಖಚಿತಪಡಿಸಿಕೊಳ್ಳಲು ತಪ್ಪು ಮಾಹಿತಿಯನ್ನು ಪತ್ತೆ ಹಚ್ಚಿ.
- **ಸೈಬರ್ ನಿಂದಿಸುವಿಕೆಯನ್ನು ತಡೆಗಟ್ಟಿ**
  ನಿಂದಿಸುವಿಕೆ ಮತ್ತು ಡಿಜಿಟಲ್ ಡ್ರಾಮಾವನ್ನು ತಪ್ಪಿಸಲು (ಅಥವಾ ವರದಿ ಮಾಡಲು) ಅವರಿಗೆ ನೆನಪಿಸಿ.

## ಪೌರತ್ವ

ನಿಮ್ಮ ಹದಿವಯಸ್ಕ ಮಗು, ತಮ್ಮ ಕ್ರಿಯೆಗಳು ತಮ್ಮ ಮೇಲೆ ಮತ್ತು ಇತರರ ಮೇಲೆ ಬೀರುವ ಪ್ರಭಾವವನ್ನು ಪರಿಗಣಿಸುವಂತಹ ಉತ್ತಮ ಡಿಜಿಟಲ್ ಪೌರರಾಗಲು ಸಹಾಯ ಮಾಡಿ.

## ಸುರಕ್ಷತೆ

ಅವರ ಕಂಟೆಂಟ್ ರಚನೆ ಪಯಣದಲ್ಲಿ ಒಬ್ಬ ಮಿತ್ರರಾಗಿ, ಅವರ ಸೃಜನಶೀಲ ಅಭಿವ್ಯಕ್ತಿಯನ್ನು ಪೋಷಿಸುವುದರ ಜೊತೆಜೊತೆಗೆ ಅವರ ಸುರಕ್ಷತೆ ಮತ್ತು ಗೌಪ್ಯತೆಗೆ ಆದ್ಯತೆ ನೀಡಲು ನೀವು ಅವರಿಗೆ ಸಹಾಯ ಮಾಡಬಹುದು.

### ಅತಿಯಾಗಿ ಹಂಚಿಕೊಳ್ಳುವುದರ ಕುರಿತು ಎಚ್ಚರದಿಂದಿರಿ

- **ಮಿತಿಗಳನ್ನು ಸೆಟ್ ಮಾಡಿ** ✓
  ಯಾವ ಮಾಹಿತಿಯು ಹಂಚಿಕೊಳ್ಳಲು ಸುರಕ್ಷಿತವಾಗಿದೆ ಮತ್ತು ಯಾವುದನ್ನು ಹಂಚಿಕೊಳ್ಳುವುದು ಸುರಕ್ಷಿತವಲ್ಲ ಎಂಬ ಕುರಿತು ಚರ್ಚಿಸಿ.
- **ಗೌಪ್ಯತಾ ಸೆಟ್ಟಿಂಗ್‌ಗಳನ್ನು ಪರಿಶೀಲಿಸಿ**
  ಅವರ ವೀಡಿಯೊಗಳು ಎಲ್ಲಿ ಕಾಣಿಸಿಕೊಳ್ಳುತ್ತವೆ ಮತ್ತು ಅವುಗಳನ್ನು ಯಾರು ನೋಡಬಹುದು ಎಂಬುದನ್ನು ನಿರ್ಧರಿಸಿ.
- **ವಿವರಗಳನ್ನು ಪರಿಶೀಲಿಸಿ**
  ಅವರ ಪದಗಳು, ಉಡುಪು ಅಥವಾ ಸ್ಥಳಗಳು ಖಾಸಗಿ ಮಾಹಿತಿಯನ್ನು ಬಹಿರಂಗಪಡಿಸದಂತೆ ನೋಡಿಕೊಳ್ಳಿ.
- **ಸಮ್ಮತಿ ಪಡೆಯಿರಿ**
  ಅವರು ತೋರಿಸುವ ಅಥವಾ ಉಲ್ಲೇಖಿಸುವ ಎಲ್ಲರೂ ಸಹ ಸಮ್ಮತಿಯನ್ನು ನೀಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- **ಪ್ರಭಾವವನ್ನು ಪರಿಗಣಿಸಿ**
  ನಿಲ್ಲಿಸಲು > ಅಪಾಯವನ್ನು ಮೌಲ್ಯಮಾಪನ ಮಾಡಲು > ನಿರ್ಧಾರ ಕೈಗೊಳ್ಳಲು ಅವರಿಗೆ ನೆನಪಿಸಿ

ಹದಿಹರೆಯದವರು ಕಂಟೆಂಟ್ ರಚಿಸುವುದಕ್ಕೆ ಸಂಬಂಧಿಸಿದ ಕುಟುಂಬ ಗೈಡ್‌ನ ಸಂಪೂರ್ಣ ಆವೃತ್ತಿಯಲ್ಲಿ ಇನ್ನಷ್ಟು ತಿಳಿಯಿರಿ.